ವರದಿಯನ್ನು ತಯಾರು ಮಾಡಿದ್ದೆವೋ ಆ ಭಾಗದಲ್ಲಿ ಮಳೆ ಬಂತು. ಈಗ ನಾವು ಅದರ ಬಗ್ಗೆ ತಿದ್ದುಪಡಿಯನ್ನು ಮಾಡದೇ ಮೆಮೊರಾಂಡಂನ್ನು ಕಳುಹಿಸಿದರೆ ಆ ಟೀಮ್‌ನವರು ಬಂದು ವಿಸಿಟ್ ಮಾಡಿದಾಗ, ಅಲ್ಲಿ ನೋಡಿದಾಗ ನಾವು ಕಳುಹಿಸುವುದೊಂದು, ನೋಡತಕ್ಕಂಥದ್ದೇ ಒಂದು ಆ ರೀತಿಯಲ್ಲಿ ಆಗುತ್ತದೆ. ಇಂತಹ ಸಂದರ್ಭದಲ್ಲಿ ನಾವು ಅವಸರದಿಂದ ಮಾಡಿ ಕಳುಹಿಸತಕ್ಕಂಥ ಪ್ರಸಂಗ ಬಂತು. ದೆಹಲಿಗೆ ಒಂದು ದಿವಸ ತಡವಾಗಿ ಬಂತು. ಮಾನ್ಯ ಫಿಲ್ಲೋನ್ ಅವರನ್ನು ಭೇಟಿಯಾಗಲಿಕ್ಕೆ ಸಮಯವನ್ನು ಕೇಳಿದ್ದೆ. ಅವರು ಸಮಯವನ್ನು ಕೊಟ್ಟಿದ್ದರು. ಮೆಮೊರಾಂಡಂನ್ನು ಮಾಡಲಿಕ್ಕೆ ತಡ ಆಗಿದ್ದರಿಂದ ಆ ದಿವಸ ಬರಲಿಕ್ಕೆ ಆಗಲಿಲ್ಲ. ಫಿಲ್ಲೋನ್ ಅವರಿಗೆ ಕೇಳಿಕೊಂಡೆ ಈ ದಿವಸ ಆಗಲಿಲ್ಲ, ಮತ್ತೊಂದು ದಿವಸಕ್ಕೆ ಅವಕಾಶ ಕೊಡಿ ಬರುತ್ತೇನೆ ಎಂದು ಕೇಳಿದೆ. ಆದ್ದರಿಂದ ಇದು ಬಿಸಿನೆಸ್ ಅಡ್ವೈಸರಿ ಕಮಿಟಿ ಆಗುವ ವರೆಗೂ ಕಾಯತಕ್ಕಂಥ ಅಗತ್ಯ ಇಲ್ಲ. ಎಲ್ಲಾ ನಿಲುವಳಿ ಸೂಚನೆಗಳಿಗಿಂತ ಅತ್ಯಂತ ಮಹತ್ವವಾದದ್ದು, ಈ ಅಭಾವಪರಿಸ್ಥಿತಿಗೆ ಸಂಬಂಧಪಟ್ಟಿರತಕ್ಕಂಥದ್ದು ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ ಆದರೆ ಈ ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿಲ್ಲ ಇದು ಪರಂಪರೆ ಇದು ಸನ್ಮಾನ್ಯ ವೀರಪ್ಪ ಮೊಯಿಲಿಯವರಿಗೂ ಗೊತ್ತಿದೆ. ಇಂಥ ಪರಿಸ್ಥಿತಿ ಬಂದಾಗ ಸರ್ಕಾರ ತಾವಾಗಿಯೇ ಇದರಲ್ಲಿ ಚರ್ಚೆ ಮಾಡಬಹುದು. ಎಂದು ಹೇಳಿದಾಗ ಈ ನಿಲುವಳಿ ಸೂಚನೆ ಬರುವುದಿಲ್ಲ. ಮೂರು ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಇದೆ, ಬಾಕಿ ವಿಚಾರವನ್ನು ಈಗಲೇ ತೆಗೆದುಕೊಳ್ಳೋಣ. ಇದನ್ನು ಕೃಷ್ಣನ್‌ರವರೂ ಕೂಡಾ ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ.

2) ರಾಜ್ಯದಲ್ಲಿ ವಿವಿಧ ಕೈಗಾರಿಕೆಗಳಲ್ಲಿ ಮುಚ್ಚಿರುವುದರಿಂದ ಕಾರ್ಮಿಕರಿಗೆ ತೊಂದರೆಯಾಗಿರುವುದು (ಅನಂವಂತಿ ಕೋರಿಕೆ)

೧-೦೦ ಪಿ. ಎಂ.

ಶ್ರೀ ಎಂ.ಎಸ್. ಕೃಷ್ಣನ್,—ನನಗೆ ೨-೩ ಪ್ರಶ್ನೆಗಳಿಗೆ ಸಮಾಜಾಯಿಷಿ ಕೊಡಬೇಕು. ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ತಾವು ಮೊದಲೇ ಬಿಸಿನೆಸ್ ಅಡ್ವೈಸರಿ ಕಮಿಟಿ ಕರೆಯಿಸಿ ತೀರ್ಮಾನ ಮಾಡಿದ್ದರೆ, ಈ ತರಹ ಗೊಂದಲವಾದ ವಾತಾವರಣ ಬರುತ್ತಿರಲಿಲ್ಲ. ಪ್ರಿಯಾರಿಟಿ ಯಾವ ಯಾವುದಕ್ಕೆ ಕೊಡಬೇಕೆಂದು ಯೋಚನೆ ಮಾಡಬೇಕಾಗಿದೆ ಅದನ್ನು ಮಾಡಿ, ಮಾಡುತ್ತೀರೆಂದು ನಂಬಿಕೆ ನನಗೆ ಇದೆ.

ಎರಡನೆಯದಾಗಿ ಕೆಲವು ಸದಸ್ಯರು ಮಾತನಾಡುವಾಗ ಬರಗಾಲದ ಪರಿಸ್ಥಿತಿ ಬಗ್ಗೆ ಮಾತನಾಡುವುದು ಮುಖ್ಯ ಇದು ಮುಂಖ್ಯವಲ್ಲ ಎಂದು ಹೇಳಿದ್ದಾರೆ. ಬರಗಾಲದ ವಿಷಯ ಬಹಳ ಮುಖ್ಯವಾದ ವಿಷಯ. ಕೈಗಾರಿಕೆಯಲ್ಲಿನ ಮುಂಗ್ಗಟ್ಟು ಮುಂಖ್ಯವಲ್ಲ ಎಂದು ನಾನೂ ಹೇಳುವುದು ಸರಿಯಲ್ಲ ಸರ್ಕಾರದ ವಿಫಲತೆಗಳನ್ನೆಲ್ಲಾ ಎತ್ತಿ ತೋರಿಸಿ ಅದನ್ನೆಲ್ಲಾ ಸೂಚಿಸಬೇಕು ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯ ಯಾರಿಗೂ ಇಲ್ಲ. ಆದೇರೀತಿಯಲ್ಲಿ ನಿಮಗೆ ನಿಳುವಳಿ ಸೂಚನೆ ಕಳುಹಿಸಿದೆ. ಈಗ ಕೈಗಾರಿಕಾ ವಲಯದಲ್ಲಿ ಮುಗ್ಗಟ್ಟು ಬಂದಿದೆ. ಇದರಲ್ಲಿ ಸರ್ಕಾರದ ವಿಫಲತೆ ಇದೆ. ಈಗಾಗಲೇ ಅನೇಕ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗ ತಾವು ಕಾರ್ಮಿಕರ ವಿಚಾರವನ್ನು ಮಾತನಾಡಬಾರದೆಂದು ಹೇಳಿದರೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಬರಗಾಲದ ವಿಷಯಂವು ಎಷ್ಟು ಮುಖ್ಯವೋ ಅಷ್ಟೇ ಮುಂಖ್ಯ ಈ ಕಾರ್ಮಿಕರ ವಿಷಯ. ಕೈಗಾರಿಕೆಯ ವಿಷಯ ನೂರಾರು ಹತ್ತು ಸಾವಿರ ಸಂಸಾರಗಳು, ಸಾವಿರಾರು ಜನರು ಬೀದಿಪಾಲಾಗಿದ್ದಾರೆ. ದಾವಣಗೆರೆಯಲ್ಲಿ, ಅನೇಕ ಕಾರ್ಖಾನೆಗಳು ಪ್ಯೆಸೂರಿನ ಕೆ.ಆರ್.ಮಿಲ್ ಮಂತ್ತು ಹೀಗೆ ಅನೇಕ ಇಂಜಿನಿಯರಿಂಗ್ ಕಾರ್ಖಾನೆಗಳು ಮುಂಚ್ಚಿಕೊಂಡಿವೆ. ಸಣ್ಣ ಸಣ್ಣ ಕಾರ್ಖಾನೆಗಳು ಸುಮಾರು ೬,೦೦೦ ನಮ್ಮ ರಾಜ್ಯದಲ್ಲಿ ಸರ್ಕಾರದ ವೈಫಲ್ಯತೆಯಿಂದ ಮುಂಚ್ಚಿ ಹೋಗಿವೆ ಎಂದು ಹೇಳುತ್ತೇನೆ. ಇವೊತ್ತು ಏಕೆ ಈ ಕಾರ್ಖಾನೆಗಳು ಮುಚ್ಚಿ ಹೋಗಿವೆ ಈ ವಿಷಯ ಚರ್ಚೆಗೆ ಅವಕಾಶ ಇರಬೇಕು ಇದರ ಬಗ್ಗೆ ಸರ್ಕಾರದ ನೀತಿ ಸರಿಯಾಗಿ ಇರಬೇಕು. ಸರ್ಕಾರದ ವಿಫಲತೆಯನ್ನು ಎತ್ತಿ ತೋರಿಸುವ ಅವಕಾಶ ಇರಬೇಕು. ಸಾವಿರಾರು ಜನರು ನಿರ್ಗತಿಕರಾಗಿದ್ದಾರೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರದ ನೀತಿಯಿಂದಾಗಿ ಇಂತಹ ಪರಿಸ್ಥಿತಿ ಉದ್ಭವಿಸಿದೆ. ಇದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಿಲ್ಲ ಸರ್ಕಾರದವರು ಏನು ಹೇಳಿದ್ದಾರೆ. ವಿಶೇಷವಾಗಿ ಅವರ ಪಕ್ಷದಲ್ಲಿಯೇ ಇದರ ಬಗ್ಗೆ ಭಿನ್ನಾಭಿಪ್ರಾಯ ಇದೆ. ಶ್ರೀ ಜೀ ವಿಜಯ ಹೇಳುತ್ತಾರೆ, ೭೦ ಸಾವಿರ ಕೈಗಾರಿಕೆಗಳು ಇದೆ, ಎಷ್ಟಕ್ಕೆ ಲೈಸೆನ್ಸ್ ಕೊಟ್ಟಿದೆ, ಎಷ್ಟು ಕೈಗಾರಿಕೆಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ ಭಿನ್ನಾಭಿಪ್ರಾಯ

ಹೇಳಿಕೆಗಳು ಪತ್ರಿಕೆಗಳಲ್ಲಿ ಬಂದಿದೆ. ಕೈಗಾರಿಕೆಗಳು ನಷ್ಟ ಆಗುವುದಕ್ಕೆ ಯಾವ ರೀತಿ ಕಾರಣಗಳು ಇದೆ. ಕೈಗಾರಿಕೆಗಳ ಅಭಿವೃದ್ಧಿ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇರಬೇಕು. ಕೈಗಾರಿಕೆಗಳ ಬಗ್ಗೆ ಕೇಂದ್ರ ಸರ್ಕಾರದ ನೀತಿ ಏನು ? ಈ ಎಲ್ಲಾ ವಿಷಯಗಳ ಬಗ್ಗೆ ಇಲ್ಲಿ ತೀರ್ಮಾನ ಮಾಡಬೇಕಾಗಿದೆ. ಇದು ಸಾರ್ವಜನಿಕ ಮಹತ್ವವಾದ ವಿಷಯ ಆಗಿರುವುದರಿಂದ ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇರಬೇಕು. ಇದಲ್ಲದೇ ಕೇವಲ ಬರಗಾಲ ಪರಿಸ್ಥಿತಿ ಮುಖ್ಯ, ಇದು ಮುಖ್ಯ ಅಲ್ಲ ಎಂದು ಕೆಲವರು ಮಾತನಾಡಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳಲು ತಯಾರಿಲ್ಲ.

ಅಧ್ಯಕ್ಷರು.—ತಾವು[ತಮ್ಮ ಸೂಚನೆಯಂ ಎರಡೂ ಮುಖ್ಯ ಅಡ್ಜೆಸಿಬಿಲಿಟಿ ಬಗ್ಗೆ ಹೇಳುತ್ತಿದ್ದೀರಾ?

ಶ್ರೀ ಎಂ.ಎಸ್. ಕೃಷ್ಣನ್.—ಅಡ್ಜೆಸಿಬಲ್ ಇದ್ದದ್ದನ್ನು ಮಾತ್ರ ಮಾತನಾಡುತ್ತಿದ್ದೇನೆ. ೬–೭ ಮಿಲ್ಲುಗಳು ಮುಚ್ಚಿಕೊಂಡಿವೆ. ದಾವಣಗೆರೆಯಲ್ಲಿ ಅನೇಕ ಕಾರ್ಖಾನೆಗಳು ಮುಚ್ಚಿಕೊಂಡಿವೆ ಕೆ.ಆರ್ ಮಿಲ್‌ಗಳು ಮುಚ್ಚಿಕೊಂಡಿವೆ ಬಳ್ಳಾರಿಯಲ್ಲಿ ಅನೇಕ ಕಾರ್ಖಾನೆಗಳು ಮುಚ್ಚಿಕೊಂಡಿವೆ.

ಮೈಸೂರಿನಲ್ಲಿರುವ ಕೆ.ಆರ್. ಮಿಲ್ಸ್ ಮುಚ್ಚಿದೆ. ಬೆಂಗಳೂರಿನಲ್ಲಿರುವ ಅಲೆಂಬಿಕ್ ಗ್ಲಾಸ್ ಇಂಡಸ್ಟ್ರೀಸ್ ಮುಚ್ಚಿದೆ. ಈ ಹಿಂದೆ ಎನ್.ಟಿ.ಸಿ. ಅವರು ಮಿನರ್ವ ಮಿಲ್‌ನ್ನು ವತ್ಸರಾಜಾ ಮಿಲ್‌ನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಅವೂ ಸಹ ಇವೊತ್ತು ಕಷ್ಟದ ಪರಿಸ್ಥಿತಿಯಲ್ಲಿವೆ. ಅನೇಕ ಇಂಜಿನಿಯರಿಂಗ್ ಕಾರ್ಖಾನೆಗಳು ಮುಚ್ಚಿವೆ. ತುಮಕೂರು ಬಳಿ ಇರುವಂತಹ ಚಾಮುಂಡಿ ಮೊಪೆಡ್ಸ್ ಮುಚ್ಚಿದೆ. ದೀಪಕ್ ಇನ್ಸುಲೇಟೆಡ್ ಕಾರ್ಖಾನೆ ಮುಚ್ಚಿದೆ. ಪಹಾಬಾದ್‌ನಲ್ಲಿರುವ ಎ.ಬಿ.ಎಂ. ಕಾರ್ಖಾನೆ ಮುಚ್ಚಿದೆ. ಸುಪೌರಂ ಆರು ಸಾವಿರ ಕೈಗಾರಿಕೆಗಳು ಮುಚ್ಚಿವೆ ಎಂದು ಸರ್ಕಾರದ ಅಂಕಿಅಂಶಗಳಿಂದ ತಿಳಿದು ಬಂದಿದೆ. ಈ ಕಾರಣದಿಂದ ಸಹಸ್ರಾರು ಕಾರ್ಮಿಕರು ತೊಂದರೆಗೆ ಒಳಗಾಗಿದ್ದಾರೆ. ಇಂದು ಇವರ ಸ್ಥಿತಿ ಏನಾಗಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಹತ್ತು ಸಹಸ್ರ ಟೆಕ್ಸ್‌ಟೈಲ್ ಕಾರ್ಮಿಕರಿಗೆ ಇವೊತ್ತು ಕೆಲಸ ಇಲ್ಲದಂತೆ ಆಗಿದೆ. ಆದ್ದರಿಂದ ಇದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಬೇಕಾಗಿದೆ. ಈ ಟೆಕ್ಸ್‌ಟೈಲ್ ಮಿಲ್‌ಗಳ ಬಗ್ಗೆ ಸರ್ಕಾರದ ನೀತಿ ಏನು ಎಂಬುದು ಮುಖ್ಯವಾದ ಪ್ರಶ್ನೆ. ಈ ಸರ್ಕಾರದ ನೀತಿ ಏನಿದೆ ಎಂಬುದನ್ನು ಮಾನ್ಯ ಪಟೇಲ್ ಅವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ದೊಡ್ಡ ದೊಡ್ಡ ಟೆಕ್ಸ್‌ಟೈಲ್ ಪಾಲಿಕರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಈ ಟೆಕ್ಸ್‌ಟೈಲ್ ಮಿಲ್‌ಗಳ ಬಗ್ಗೆ ಕೇಂದ್ರ ಸರ್ಕಾರದ ನೀತಿ ಸರಿಯಾಗಿಲ್ಲ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಈ ಪ್ರತಿಗಾಮಿ ನೀತಿಯಿಂದಾಗಿ ಈ ದೇಶದಲ್ಲಿರುವ ಮತ್ತು ಈ ರಾಜ್ಯದಲ್ಲಿರುವ ಟೆಕ್ಸ್‌ಟೈಲ್ ಮಿಲ್‌ಗಳ ಕಾರ್ಮಿಕರು ತೊಂದರೆ ಅನುಭವಿಸಬೇಕಾಗಿದೆ. ಈ ಒಂದು ತಪ್ಪನ್ನು ನೀವು ಕೇಂದ್ರ ಸರ್ಕಾರದ ಮೇಲೆ ಹಾಕಿ ನೀವು ಇದರಿಂದ ತಪ್ಪಿಸಿಕೊಳ್ಳುವುದು ಸರಿಯಲ್ಲ. ಒಂದು ವೇಳೆ ರಾಜ್ಯ ಸರ್ಕಾರದ ನೀತಿ ಇದೇ ಆಗಿದ್ದರೆ, ಅದು ಅಕ್ಷಮ್ಯ ಅಪರಾಧವಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಈ ಬಗ್ಗೆ ನೀವು ತಪ್ಪಿಸಿಕೊಂಡು ಹೋಗುವ ನೀತಿಯನ್ನು ತಾಳುತ್ತಿದ್ದೀರಿ. ಇಲ್ಲಿ ಟೆಕ್ಸ್‌ಟೈಲ್ ಮಿಲ್‌ಗಳ ವಿಚಾರವೇ ಬೇರೆ ಮತ್ತು ಇತರೇ ಕಾರ್ಖಾನೆಗಳ ವಿಚಾರವೇ ಬೇರೆ. ಟೆಕ್ಸ್‌ಟೈಲ್ ಮಿಲ್‌ಗಳ ವಿಚಾರ ತೆಗೆದುಕೊಂಡರೆ ಇವೊತ್ತು ಮುಚ್ಚಿ ಹೋಗಿರುವಂತಹ ಕೆಲವು ಮಿಲ್‌ಗಳನ್ನು ಮತ್ತೆ ನಡೆಸುವುದಕ್ಕೆ ಸಾಧ್ಯವಿದೆ. ಚೆನ್ನಾಗಿ ನಡೆಯಲು ಸಾಧ್ಯವಿರುವಂತಹ ಕೆಲವು ಮಿಲ್‌ಗಳನ್ನು ಮತ್ತೆ ಆರಂಭ ಮಾಡಿಸಲು ನೀವು ಪ್ರಯತ್ನ ಪಡಬಹುದು. ಅದಕ್ಕೆ ಬದಲು ನೀವೇ ಏತಕ್ಕೆ ಈ ಮಿಲ್‌ಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬಾರದು ? ಅಥವಾ ನೀವು ನಡೆಸುವುದಕ್ಕೆ ವ್ಯವಸ್ಥೆ ಮಾಡಬಹುದು. ಈಗ ತಮಿಳುನಾಡು, ಗುಜರಾತ್, ಮಹಾರಾಷ್ಟ್ರದಲ್ಲಿ ಟೆಕ್ಸ್‌ಟೈಲ್ ಕಾರ್ಪೊರೇಷನ್ ಎಂದು ಪ್ರಾರಂಭ ಮಾಡಿ, ಅವುಗಳ ಮೂಲಕ ಅಲ್ಲಿನ ಮಿಲ್‌ಗಳನ್ನು ತೆಗೆದುಕೊಂಡು ಆ ಸರ್ಕಾರಗಳೇ ನಡೆಸುತ್ತಿವೆ. ಆದ್ದರಿಂದ ಅದೇ ರೀತಿ ಇಲ್ಲಿ ಸಹ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ? ನಾಗಪುರದಲ್ಲಿ ಟಾಟಾ ಕಂಪನಿಯವರಿಗೆ ಸೇರಿದ ಒಂದು ಹಳೆಯ ಟೆಕ್ಸ್‌ಟೈಲ್ ಮಿಲ್‌ನ್ನು ಮುಚ್ಚಿದ್ದರು. ಇದರಿಂದ ೭ ಸಾವಿರ ಜನರಿಗೆ ಕೆಲಸ ಇಲ್ಲದಂತೆ ಆಗಿತ್ತು. ಆ ಕಾರಣದಿಂದ ಮಹಾರಾಷ್ಟ್ರ ಸರ್ಕಾರದವರು ಅಲ್ಲಿನ ಟೆಕ್ಸ್‌ಟೈಲ್ ಕಾರ್ಪೊರೇಷನ್ ಮೂಲಕ ತಮ್ಮ ವಶಕ್ಕೆ ಅದನ್ನು ತೆಗೆದುಕೊಂಡರು. ಆದರೆ ಅದನ್ನು ಪುನಃ ನಡೆಸಲು ವ್ಯವಸ್ಥೆ ಮಾಡಲಿಲ್ಲ. ನಂತರ ಸುಪ್ರೀಂ ಕೋರ್ಟಿನವರು ಅದನ್ನು ನಡೆಸಬೇಕೆಂದು ತೀರ್ಮಾನ ಕೊಟ್ಟರು.

ಅಧ್ಯಕ್ಷರು.—ತಮ್ಮ ನಿಲುವಳಿ ಸೂಚನೆಯನ್ನು ಆಡ್ಮಿಟ್ ಮಾಡಿಕೊಳ್ಳುವ ಬಗ್ಗೆ ಮಾತ್ರ ಹೇಳಿ?

ಶ್ರೀ ಎಂ.ಎಸ್. ಕೃಷ್ಣನ್.—ಈ ಮೊದಲು ತಾವು ಸಹ ಪಿ.ಯು.ಸಿ. ಅಧ್ಯಕ್ಷರಾಗಿ ಕೆಲಸ ಮಾಡಿ ಇದರ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದೀರಿ. ಆದ್ದರಿಂದ ತಮಗೆ ಎಲ್ಲಾ ವಿವರಗಳನ್ನು ಹೇಳುವ ಅಗತ್ಯವಿಲ್ಲ. ಈ ರಾಜ್ಯದಲ್ಲಿ ಸಹ ಒಂದು ಟೆಕ್ಸ್‌ಟೈಲ್ ಕಾರ್ಪೊರೇಷನ್ ಏತಕ್ಕೆ ರಚಿಸಬಾರದು ? ಈ ಕೆಲವು ಮಿಲ್‌ಗಳು ಏತಕ್ಕೆ ನಷ್ಟದಲ್ಲಿವೆ ಎಂಬುದಕ್ಕೆ ತಾವು ಕಾರಣ ಕಂಡುಹಿಡಿಯಬೇಕು ? ಇದಕ್ಕೆ ಯಾರು ಕಾರಣಕರ್ತರು ಎಂಬುದನ್ನು ತಾವು ತಿಳಿದುಕೊಳ್ಳಲು ತಾವು ಮುಂದೆ ಬರುತ್ತಿಲ್ಲ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಾಗ ಮಾತ್ರ ಸರ್ಕಾರ ಮತ್ತು ಸಂಬಂಧಪಟ್ಟ ಮಂತ್ರಿಗಳು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಿದಂತೆ ಆಗುತ್ತದೆ. ಈ ಬಗ್ಗೆ ತಮ್ಮಲ್ಲಿ ಹಣ ಇಲ್ಲ, ಮುಂದೆ ಯೋಚನೆ ಮಾಡೋಣ ಎಂದು ಹೇಳುವುದು ಸರಿಯಲ್ಲ. ಈ ಮಿಲ್‌ನವರಿಗೆ ನೀವು ಬ್ಯಾಂಕ್‌ಗಳ ಮೂಲಕ ಇಲ್ಲವೇ ಐ ಡಿ. ಬಿ. ಐ.ನಿಂದ ಹಣದ ಸಹಾಯ ಒದಗಿಸಿದರೆ ಅವರು ಆ ಹಣವನ್ನು ದುರ್ವಿನಿಯೋಗಪಡಿಸಿಕೊಳ್ಳುತ್ತಾರೆ. ಆದ್ದರಿಂದ ಅವರಿಗೆ ಹಣದ ಸಹಾಯ ಮಾಡುವುದಕ್ಕೆ ಬದಲು ನೀವೇ ಇವುಗಳನ್ನು ವಹಿಸಿಕೊಂಡು ನಡೆಸುವುದು ಒಳ್ಳೆಯದು. ಏನಿದ್ದರೂ ಈ ಬಗ್ಗೆ ನಾವು ಇಲ್ಲಿ ಅಂಕಿಶಗಳ ಆಧಾರದ ಮೇಲೆ ಚರ್ಚೆ ಮಾಡಬೇಕಾಗಿದೆ. ಕೇವಲ ೫ ನಿಮಿಷಗಳಲ್ಲಿ ಇದನ್ನು ಹೇಳಿ ಮುಗಿಸುವುದಕ್ಕಾಗುವುದಿಲ್ಲ. ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಲು ಮಾನ್ಯ ಮಂತ್ರಿಗಳು ಈ ಮಿಲ್‌ಗಳ ಮಾಲೀಕರನ್ನು ಕಾರ್ಮಿಕ ಮುಖಂಡರನ್ನು ಕರೆಸಿದರಂತೆ. ಅಲ್ಲಿ ಅಧಿಕಾರಿಗಳು ಸಹ ಇದ್ದರು. ಆದರೆ ಏನೂ ಪ್ರಯೋಜನ ಆಗಲಿಲ್ಲ ? ಮಿಲ್‌ಮಾಲೀಕರು ಮಿಲ್ ತೆಗೆಯಲು ತಯಾರಿಲ್ಲ. Proof of the pudding is in eating ಅಲ್ಲಿ ಈಟಿಂಗ್ ಇಲ್ಲವೇ ಇಲ್ಲ. ಇವತ್ತಿನ ದಿವಸ ಎಲ್ಲಾ ಸ್ಟಾರ್ವೇಷನ್ ಆಗಿದೆ. ಕಾರ್ಮಿಕರು ಹಸಿವಿನಿಂದ ಬಳಲುತ್ತಾ ಇದ್ದಾರೆ. ಇದರ ಬಗ್ಗೆ ಸರ್ಕಾರದವರು ಏನು ಯೋಚನೆ ಮಾಡಿದ್ದೀರಿ, ತಮಗೆ ಜವಾಬ್ದಾರಿ ಇಲ್ಲವೇ, ಇದರ ಬಗ್ಗೆ ಏನು ಮಾಡುತ್ತಿದ್ದೀರಿ ಎನ್ನುವುದು ಒಹಳ ಮುಖ್ಯವಾದ ಅಂಶ ಮಾನ್ಯ ಶಾಸಕ ಪಂಪಾಪತಿಯವರು ಹಂಗರ್ ಸ್ಟ್ರೈಕ್ ಮಾಡುವುದಾಗಿ ತೀರ್ಮಾನ ಮಾಡಿದ್ದಾರೆ. ಅದನ್ನು ಸರ್ಕಾರಕ್ಕೆ ಕಾಲಾವಕಾಶ ಕೊಡಲು ಮುಂದೂಡಲಾಯಿತು ಸರ್ಕಾರವನ್ನು ನಿರ್ಧಾರ ಮಾಡಿದ್ದರಿಂದ ಪುನಃ ಉಪವಾಸ ಮುಷ್ಕರ ಹೂಡಲು ತೀರ್ಮಾನ ಮಾಡಿದ್ದಾರೆ. ಅದು ಅನಿರ್ದಿಷ್ಟ ಕಾಲದ ಉಪವಾಸ. ಇದು ತೋರಿಕೆಗೆ ಮಾಡುವುದಲ್ಲ. ದಾವಣಗೆರೆಯನ್ನು ಮ್ಯಾನ್‌ಚಸ್ಟರ್ ಆಫ್ ಕರ್ನಾಟಕ ಎಂದು ಹೇಳುತ್ತಾರೆ. ಆದರೆ ಈಗ ಮ್ಯಾನ್‌ಚಸ್ಟರೂ ಇಲ್ಲ, ಏನೂ ಇಲ್ಲ, ಅದು ಏನಾಯಿತೋ ಗೊತ್ತಿಲ್ಲ. ಆದುದರಿಂದ ತಾವು ನನಗೆ ಈ ವಿಚಾರವನ್ನು ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಸರ್ಕಾರ ಇದರ ಬಗ್ಗೆ ತಳೆದಿರುವುದು ತಪ್ಪು ಧೋರಣೆ. ಈ ತಪ್ಪು ಧೋರಣೆ ಕೈಗಾರಿಕೆ ಬಗ್ಗೆ ಮಾತ್ರವಲ್ಲ, ಬೇರೆಯದರಲ್ಲೂ ಇದೆ. ಹಿಂದೆ ಆಲೆಂಬಿಕ್ ಗ್ಲಾಸ್ ಫ್ಯಾಕ್ಟರಿಯ ಕಾರ್ಮಿಕರು ಇಲ್ಲಿಗೆ ಬಂದಿದ್ದರು ಅವರ ಅರೆಸ್ಟಾಯಿತು. ಒಂದು ದಿನ ಜೈಲಿಗೆ ಹೋದರೆ ಹೋಗಲಿ ಎಂದು ಕಳಿಸಿಬಿಟ್ಟಿರಿ. It is a viable unit. ವಯೋಬಲ್ ಯೂನಿಟ್ ಯಾವುದು ಇದೆ ಅದನ್ನು ನಡೆಸುವುದಕ್ಕೆ ಸಾಧ್ಯವಿದೆ, ಅದನ್ನು ಸರ್ಕಾರವೇ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಬೇಕು. ರಾಜಕೀಯ ವಿಲ್ ಅಥವಾ ನಿಶ್ಚಲತೆ ಇದರೆ ಖಂಡಿತ ಸರ್ಕಾರ ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದು ಜನತಾ ಪಕ್ಷದ ಸರ್ಕಾರಕ್ಕೆ ರಾಜಕೀಯ ವಿಲ್ ಇಲ್ಲ. ಇದು ಬೃಹದಾಕಾರವಾದ ಸಮಸ್ಯೆಯಾಗಿದೆ, ರಸ್ತೆ ರೋಕೋ ಆಗಿದೆ, ಜೈಲಿಗೆ ಹೋಗಿದ್ದಾರೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಆಳವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೆ, ಇವೊತ್ತಿನ ದಿವಸ ತಮಗೆ ಸಲ್ಲಿಸಿದ ತಕ್ಕಂಥ ಪತ್ರದಲ್ಲಿ ಸದನದಲ್ಲಿ ಇವತ್ತು ಇರತಕ್ಕಂಥ ಕಾರ್ಯಕ್ರಮಗಳನ್ನು ಮುಂದೂಡಿ ಮುಖ್ಯವಾದಂಥ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ನಾವು ತಮ್ಮಲ್ಲಿ ಕೇಳಿಕೊಂಡಿದ್ದೇವೆ. ಈಗಾಗಲೇ ನಮ್ಮ ನಾಯಕರು ಈ ಬಗ್ಗೆ ತಿಳಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ೬ ಹತ್ತಿ ಗಿರಣಿಗಳು ನಿಂತು ಹೋಗಿವೆ. ಅನೇಕ ಇಂಜನಿಯರಿಂಗ್

† ಈ ಚಿಪ್ಪೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಲಾಗಿದೆ.

ಕೈಗಾರಿಕೆಗಳು ನಿಂತು ಹೋಗಿವೆ. ಈ ಎಲ್ಲಾ ಕೈಗಾರಿಕೆಗಳು ಈ ರೀತಿ ನಿಂತು ಹೋಗಿರುವುದರಿಂದ ಜನರಿಗೆ ತುಂಬಾ ಸಮಸ್ಯೆಯಾಗಿದೆ. ಒಂದು ಕಡೆ ಬರಗಾಲದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸವಿಲ್ಲದೆ ಜನ ನರಳುತ್ತಾ ಇದ್ದಾರೆ. ಅಲ್ಲಿ ಮಳೆ ಇಲ್ಲ, ಬೆಳೆ, ಇಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶದ ಜನ ಪಟ್ಟಣ ಪ್ರದೇಶಕ್ಕೆ ಬಂದು ಜೀವನ ಮಾಡಂವುದರಿಂದ ಇಲ್ಲಿ ಕೈಗಾರಿಕೆಗಳು ನಡೆಯುದೇ ಇರುವುದರಿಂದ ಆ ಜನರಿಗೂ ತೊಂದರೆಯಾಗಿದೆ. ಇದು ಬಹಳ ಮಂಖ್ಯೆ ವಾದಂಥ ವಿಚಾರ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಇವತ್ತಿನ ದಿವಸ ಆ ಕೈಗಾರಿಕೆಗಳು ನಿಂತು ಹೋಗಿವೆ ಎಂದರೆ ಅದರ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು.ಟೆಕ್ಸ್‌ಟೈಲ್ ಮಿಲ್‌ವಿಷಯವೇಳುವುದಾದರೆ,ಹೊಸ ಕೈಗಾರಿಕೆಗಳಿಗೆಲ್ಲ ಸನ್ನ ಕೊಡುತ್ತಾರೆ, ಸಹಕಾರ ಸಂಸ್ಥೆಗಳಿಂದ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ೨೫ಸಾವಿರ ಕದಿರಿನ ಒಂದು ಮಿಲ್ಲನ್ನು ತಯಾರು ಮಾಡಬೇಕಾದರೆ ಸುಮಾರು ಹತ್ತೂವರೆ ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಹೀಗೆ ಹತ್ತೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಈ ಮಿಲ್ ತಯಾರು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದಾದರೆ ಇವತ್ತು ನಡೆಯತಕ್ಕಂಥ ಕೈಗಾರಿಕೆಗಳಿಗೆ ಸ್ವಲ್ಪ ಹಣ ಸಹಾಯ ಮಾಡಿ ಕೈಗಾರಿಕೆಗಳನ್ನು ಪ್ರಾರಂಭಿಸಿದರೆ ಕೆಲಸಕಾರರಿಗೆ ಜೀವನ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಒಂದೇ ಊರಿನಲ್ಲಿ ೪ ಕೈಗಾರಿಕೆಗಳು ಮುಚ್ಚಿ ಹೋಗಿ ಮೂರು ಸಾವಿರ ಜನ ಕೆಲಸಗಾರರು ನಿರ್ಗತಿಕರಾಗಿದ್ದಾರೆ. ದಾವಣಗೆರೆಯಲ್ಲಿ ಟೆಕ್ಸ್‌ಟೈಲ್ ವ್ಯವಹಾರ ಬಹಳ ಮಂಖ್ಯೆವಾಗಿ ನಡೆಯತಕ್ಕಂಥಾದ್ದು. ಇವತ್ತಿನ ದಿವಸ ದಾವಣಗೆರೆಯಲ್ಲಿ ವ್ಯಾಪಾರ, ವ್ಯವಹಾರವೆಲ್ಲಾ ನಿಂತು ಹೋಗಿದೆ. ಅನೇಕ ರೀತಿಯ ಸಮಸ್ಯೆಗಳು ಅಲ್ಲಿ ಉದ್ಭವವಾಗುತ್ತಿದೆ. ಈ ಬಗ್ಗೆ ಈ ಸರ್ಕಾರವನ್ನು ಕಂಡು ಮಾತನಾಡಿ ಆದಷ್ಟು ಜಾಗ್ರತೆ ಈ ಕೈಗಾರಿಕೆಗಳನ್ನು ಪ್ರಾರಂಭ ಮಾಡಿಸಬೇಕು ಎಂದು ಕೇಳಿಕೊಂಡಿದ್ದೇವೆ. ಆದರೆ ಏನೂ ಆಗಿಲ್ಲ. ಮಾನ್ಯ ಕೈಗಾರಿಕಾ ಸಚಿವರು ಒಂದು ಸಭೆ ಕರೆದರೆ, ಆದೇ ಅಲ್ಲಿಗೇ ನಿಂತು ಹೋಯಿತು. ಮುಂದೆ ಕೆಲಸಗಾರರು ಏನು ಮಾಡಬೇಕು ಹಳ್ಳಿಗಳಲ್ಲಿ ಮಳೆ ಇಲ್ಲ, ಬೆಳೆ ಇಲ್ಲ. ಕೆಲಸ ಇಲ್ಲ. ಪಟ್ಟಣಗಳಲ್ಲಿ ಕೈಗಾರಿಕೆಗಳು ನಿಂತು ಹೋಗಿ ಕಾರ್ಮಿಕರು ನಿರುದ್ಯೋಗದಲ್ಲಿ ಬಳಲುತ್ತಿದ್ದಾರೆ, ಬೇರೆ ಕೆಲಸ ಮಾಡುವುದಕ್ಕೆ ಉದ್ಯೋಗ ಇಲ್ಲ. ಆದ್ದರಿಂದ ಕೈಗಾರಿಕೆಗಳನ್ನು ಪ್ರಾರಂಭಿಸಿ. ಮಾನ್ಯ ಕೃಷ್ಣಸ್ವಾರವರು ಹೇಳಿದ ಹಾಗೆ, ಖಾಯಿಲೆ ಕೈಗಾರಿಕೆಗಳನ್ನು ನಡೆಸುವುದಕ್ಕೆ ಆಗುವುದಿಲ್ಲ ಎನ್ನುವ ಪರಿಸ್ಥಿತಿಯಲ್ಲಿದೆ ಆದರೆ ಒಳ್ಳೆಯ ಕೈಗಾರಿಕೆಗಳು ಆಡಳಿತ ವರ್ಗದ ಒಂದು ವ್ಯವಹಾರದಿಂದ ಅಲ್ಲಿ ಹಣದ ಮುಗ್ಗಟ್ಟಾಗಿದೆ. ಅವರು ಅದಕ್ಕೆ ಹಣವನ್ನು ಒದಗಿಸುವುದಕ್ಕೆ ಹಣಕಾಸಿನ ಸಂಸ್ಥೆಗಳಲ್ಲಿ, ಸಹಕಾರಿ ಸಂಸ್ಥೆಗಳಲ್ಲಿ ಪ್ರಯತ್ನ ಮಾಡಿದರೆ ಸಾಧ್ಯವಾಗುತ್ತದೆ. ಸರ್ಕಾರದಲ್ಲಿ ಹಣ ಇಲ್ಲ ಅಂದರೆ, ಬ್ಯಾಂಕುಗಳಲ್ಲಿ ಹಣ ಇಲ್ಲವೆ? ಬೇರೆ ಹಣಕಾಸಿನ ಸಂಸ್ಥೆಗಳಿಗಾದರೂ ಹಣ ಕೊಡಿಸಿ ಕೈಗಾರಿಕೆಗಳನ್ನು ನಡೆಸುವುದಕ್ಕೆ ಪ್ರಯತ್ನ ಮಾಡಬೇಕು. ಕೊಟ್ಟಿಂಥ ಹಣದ ವ್ಯವಸ್ಥೆಯನ್ನು ಹಣಕಾಸಿನ ಸಂಸ್ಥೆಯವರೇ ನೋಡಿಕೊಳ್ಳಲಿ. ಕೆಲಸಗಾರರಿಗೆ ಉದ್ಯೋಗ ಸಿಗುತ್ತದೆ.

ಅಧ್ಯಕ್ಷರು — ತಾವು ಮುಂಕ್ತಾಯ ಮಾಡಿ.

ಶ್ರೀ ಪಂಪಾಪತಿ. – ಇದು ಬಹಳ ಗಂಭೀರವಾದಂಥ ವಿಚಾರವಾದುದರಿಂದ ತಾವು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ನಾವು ಇಲ್ಲಿಗೆ ಬಂದು ಬರೀ ಋಣ ಮಾತನಾಡುವುದಕ್ಕೆ ಇಷ್ಟ ಇಲ್ಲ. ನಮ್ಮ ರಾಜ್ಯದಲ್ಲಿ, ನಮ್ಮ ಕ್ಷೇತ್ರದಲ್ಲಿ ಜನರಿಗೆ ಆಗತಕ್ಕ ತೊಂದರೆಗಳನ್ನು ಸರ್ಕಾರದ ಗಮನಕ್ಕೆ ತಂದು ಅವುಗಳನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು, ಹಾಗೆ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳದಿದ್ದರೆ ನಾವು ಮಾತನಾಡಿ ಏನು ಪ್ರಯೋಜನ ನಾವು ಇಲ್ಲಿ ಕುಳಿತುಕೊಂಡು ಏನು ಪ್ರಯೋಜನ, ಸಭೆ ನಡೆಸಿ ಏನು ಪ್ರಯೋಜನ? ಇವತ್ತು ಬಟ್ಟೆ ಗಿರಣಿಗಳು ಇನ್ನಿತರ ಕಾರ್ಖಾನೆಗಳು ಬಳ್ಳಾರಿಯಲ್ಲಿ, ಮೈಸೂರಿನಲ್ಲಿ, ದಾವಣಗೆರೆಯಲ್ಲಿ, ಮುಚ್ಚಿವೆ. ಇನ್ನು ಹಲವಾರು ಮಿಲ್‌ಗಳು ಮುಚ್ಚುತಕ್ಕಂಥ ಸ್ಥಿತಿಯಲ್ಲಿವೆ ಸರ್ಕಾರ ಏತಕ್ಕೆ ಇದರ ಬಗ್ಗೆ ಯೋಚನೆ ಮಾಡುತ್ತಿಲ್ಲ. ಇದು ವೇನಕೆ ವಿಶ್ವಾಮಿತ್ರರ ಕಥೆಯಾಗಿದೆ. ಒಂದು ಕಡೆ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗುತ್ತೇವೆಂದು ಹೇಳುವುದು, ಇನ್ನೊಂದು ಕಡೆ ಮುಚ್ಚಿರುವ ಕಾರ್ಖಾನೆಗಳಿಗೂ ನವಗೂ

ಸಂಬಂಧ ಇಲ್ಲ ಎನ್ನುವುದು. ಇನ್ನೂ ಹೆಚ್ಚಿನ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ –ಸ್ವಾಮಿ, ನಾವು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದುದು ಕಾರ್ಮಿಕ ವರ್ಗದವರಿಗೆ ಆಗುತ್ತಿರುವ ತೊಂದರೆಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶ ಬೇಕೆಂಬ ಕಾರಣದಿಂದ ಕಾರ್ಮಿಕರ ತೊಂದರೆಗಳ ಬಗ್ಗೆ ಈಗಾಗಲೇ ನನ್ನ ಸ್ನೇಹಿತರು ಹೇಳಿದ್ದಾರೆ. ಗುಲ್ಬರ್ಗದಲ್ಲಿ ಕೂಡ ಇದೇ ಪರಿಸ್ಥಿತಿ ಇದೆ. ಅಲ್ಲಿ ಎಬಿಎಲ್ ಕಾರ್ಖಾನೆ ಇದೆ. ಸುಮಾರು ೨೫೦೦ ಜನ ಕಾರ್ಮಿಕರು ಇದ್ದು, ದೊಡ್ಡ ಪ್ರಮಾಣದ ಬಾಯ್ಲರುಗಳನ್ನು ಅವರು ತಯಾರು ಮಾಡುತ್ತಾರೆ. ಸುಮಾರು ೪೦–೫೦ ಕೋಟಿ ರೂಪಾಯಿ ಬಂಡವಾಳ ಹೂಡಿರತಕ್ಕ ಕಾರ್ಖಾನೆ ಇದು. ಅಲ್ಲಿ ಕಳೆದ ೧೨ತಿಂಗಳುಗಳಿಂದ ಕಾರ್ಮಿಕರಿಗೆ ಕೆಲಸ ಇಲ್ಲ. ಲೇ ಆಫ್ ಮಾಡಿಲ್ಲ. ಬಿ. ಹೆಚ್. ಇ. ಎಲ್. ಮತ್ತು ರಾಯೇಚೂರು ಥರ್ಮಲ್ ಪ್ಲಾಂಟಿಗೆ ಆರ್ಡರ್ಸ್ ಕೊಡಿಸಿ ಎಂದು ಸರ್ಕಾರಕ್ಕೆ ಮತ್ತು ಮುಖ್ಯಮಂತ್ರಿಗಳಿಗೆ ಅನೇಕ ಸಲ ಕಂಪನಿಯವರು ಮತ್ತು ಯೂನಿಯನ್‌ನವರು ಮನವಿ ಮಾಡಿದ್ದಾರೆ, ಆದರೂ ಪ್ರಯೋಜನವಾಗಿಲ್ಲ. ಐಡಿಬಿಐನಿಂದ ಲೋನ್ ಬರಬೇಕಾಗಿದೆ, ಅದಕ್ಕೆ ಪ್ರಧಾನ ಮಂತ್ರಿಯವರು ಓ.ಕೆ. ಮಾಡಬೇಕು. ಈ ವಿಷಯವನ್ನು ಎರಡು ಸದನಗಳಲ್ಲಿ ಪ್ರಸ್ತಾಪ ಮಾಡಿದ್ದೇವೆ, ಆದರೂ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಕಳೆದ ೧೨ ತಿಂಗಳಿಂದ ಕಾರ್ಮಿಕರು ಉಳಿತಾಯ ಮಾಡಿದ ಸೇವಿಂಗ್ಸ್ ಖರ್ಚಾಗಿದೆ. ಪ್ರಾವಿಡೆಂಟ್ ಫಂಡ್ ಖರ್ಚಾಗಿದೆ. ಮನೆಯಲ್ಲಿದ್ದ ಸಾಮಾನುಗಳನ್ನೆಲ್ಲಾ ಮಾರಾಟ ಮಾಡಿಕೊಂಡು ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರು ಪ್ರಧಾನ ಮಂತ್ರಿಯವರೊಂದಿಗೆ, ಹಾಗೂ ಸೆಂಟ್ರಲ್ ಕ್ಯಾಬಿನೆಟ್ ಮಂತ್ರಿಗಳವರೊಂದಿಗೆ ಮಾಡಿರುವಂಥ ವ್ಯವಹಾರದ ಕಡತವನ್ನು ಏಪ್ರಿಲ್ ತಿಂಗಳವರೆಗೂ ನೋಡಿದ್ದೇವೆ ಎಲ್ಲಿಯೂ ಇದರ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಮತ್ತೆ ಇವತ್ತು ಗುಲ್ಬರ್ಗ ಜಿಲ್ಲೆಯಲ್ಲಿ ೨೦ ರಿಂದ ೨೫ ಸಿಮೆಂಟ್ ಫ್ಯಾಕ್ಟರಿಗಳು ಇವೆ. ಗುಲ್ಬರ್ಗ ಜಿಲ್ಲೆ ಎಂದರೆ, ಸಿಮೆಂಟ್ ಜಿಲ್ಲೆ ಎನ್ನುವಂತಾಗಿದೆ. ೧೫ ದಿವಸಗಳ ಹಿಂದೆ ತಾಜ್ ಶ್ರೀ ಸಿಮೆಂಟ್ ಫ್ಯಾಕ್ಟರಿಯಲ್ಲಿ ಒಬ್ಬರು ತೀರಿಕೊಂಡರು. ಅದು ಯಾರಿಗೂ ತಿಳಿದಿಲ್ಲ. ವಾಸನೆ ಬಂದಮೇಲೆ ಅಲ್ಲಿ ನಾಯಿ ಸತ್ತಿರಬಹುದೆಂದು ಹೋಗಿ ನೋಡಿದಾಗ ಕಾರ್ಮಿಕರನೊಬ್ಬ ಸತ್ತು ಬಿದ್ದಿರುವುದು ಕಂಡು ಬಂದಿದೆ. ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದು ಮುಖ್ಯವಲ್ಲ ಕಾರ್ಮಿಕರ ಹಿತವನ್ನು ಕೂಡ ನೋಡಬೇಕಾಗಿದೆ. ಕಾರ್ಮಿಕ ಇಲಾಖೆಗೂ, ಇಂಡಸ್ಟ್ರೀಸ್ ಇಲಾಖೆಗೂ ಸಹಕಾರ ಇರಬೇಕು. ವೈಯಬಲ್ ಆಗಿರತಕ್ಕ ಕಾರ್ಖಾನೆಗಳನ್ನು ಸರ್ಕಾರ ನಡೆಸುವುದಕ್ಕೆ ಏತಕ್ಕೆ ಹಿಂದೆ ಮುಂದು ಯೋಚನೆ ಮಾಡುತ್ತಿದೆಯೋ ಗೊತ್ತಿಲ್ಲ. ಇದು ಬಹಳ ಗಂಭೀರವಾಗಿರುವಂಥ ವಿಷಯವಾಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಸನ್ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು.— ಮಾನ್ಯ ವೆಂಕಟರಾಮಯ್ಯನವರು ದಯವಮಾಡಿ ಕುಳಿತುಕೊಳ್ಳಬೇಕು. ಈಗ ಮಾನ್ಯ ಭೂಪತಿಯವರು ಮಾತನಾಡಬೇಕು.

ಶ್ರೀ ಯು. ಭೂಪತಿ (ಸಂಡೂರು).— ಅಧ್ಯಕ್ಷರೆ, ಈ ವಿಚಾರ ಬಹಳ ಪ್ರಾಮುಖ್ಯವಾದುದು ಮತ್ತು ಗಹನವಾದುದು ಎಂದು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಕೆಲವು ನಿಮಿಷಗಳ ಹಿಂದೆ ಹಣಕಾಸಿನ ಪರಿಸ್ಥಿತಿ ಸರ್ಕಾರದಲ್ಲಿ ಕೆಟ್ಟಿದೆ, ಇನ್ನು ಒಂದು ತಿಂಗಳಲ್ಲಿ ಸುಧಾರಿಸುತ್ತದೆ ಎಂದು ಹೇಳಿದರು. ಕೈಗಾರಿಕೆಗಳು ಸರಿಯಾಗಿ ನಡೆದರೆ ಸರ್ಕಾರಕ್ಕೆ ಆದಾಯ ಬರುತ್ತದೆ. ಇವೊತ್ತು ಕೈಗಾರಿಕೆಗಳನ್ನು ಮುಚ್ಚಿರುವುದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಕಡಿಮೆಯಾಗುತ್ತಿದೆ. ಇವೊತ್ತು ಏನಾಗಿದೆ, ಈಗ ಇರತಕ್ಕ ನಿರುದ್ಯೋಗ ಸಮಸ್ಯೆಯನ್ನು ಹೆಚ್ಚಿನಮಟ್ಟದಲ್ಲಿ ನಿವಾರಣೆ ಮಾಡಲಿಕ್ಕೆ ಆಗದೇ ಇದ್ದರೂ ಉದ್ಯೋಗಿಗಳನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತಿದ್ದಾರೆ. ಆಶ್ಚರ್ಯದ ವಿಚಾರ ಎಂದರೆ ಸರ್ಕಾರದೊಳಗೆ ದ್ವಂದ್ವ ನೀತಿ ಇದೆ. ಸರ್ಕಾರದಲ್ಲಿರತಕ್ಕ ಮಂತ್ರಿಗಳಿಗೆ ಸರ್ಕಾರದ ನೀತಿ ಅರ್ಥವಾಗಿಲ್ಲ. ಅಧ್ಯಕ್ಷರೆ ತಮಗೆ ಕನ್‌ವಿನ್ಸ್ ಮಾಡಲಿಕ್ಕೆ ಒಂದು ಉದಾಹರಣೆ ಹೇಳಬೇಕೆಂದರೆ ನಮ್ಮ ಜಿಲ್ಲೆಯಲ್ಲಿ ತುಂಗಭದ್ರ ಫೈಬರ್ಸ್ ಲಿಮಿಟೆಡ್ ಇದೆ. ಇಲ್ಲಿ ನಾವು ಮಾತನಾಡತಕ್ಕವರು ಯಾರು ಕೈಗಾರಿಕೆ ಮಾಲೀಕರು ಅಲ್ಲ. ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಜನರ ಕಷ್ಟವನ್ನು ಅರಿತುಕೊಂಡು ಅವರ ಬಗ್ಗೆ ಕಾಳಜಿ ಇಟ್ಟುಕೊಂಡು ಮಾತನಾಡುತ್ತಿದ್ದೇವೆ. ಸುಮಾರು ೫೮ ಕೋಟಿ ರೂಪಾಯಿಗಳ

ಬಂಡವಾಳ ಹಾಕಿದ ಸಂಸ್ಥೆಗೆ ಐಡಿಬಿಐ ನವರು ೩೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾನು ಈ ಕೈಗಾರಿಕೆಗಳ ಬಗ್ಗೆ ಕೈಗಾರಿಕಾ ಮಂತ್ರಿಗಳ ಜೊತೆ ಕ್ಲಿಕ್ತುಕೊಂಡು ಮಾತನಾಡಿದ್ದೇನೆ. ಸುಮಾರು ೫೮ ಕೋಟಿ ರೂಪಾಯಿಗಳ ಬಂಡವಾಳ ಹಾಕಿರತಕ್ಕ ಜಂಟೀ ಕ್ಷೇತ್ರದ ಕೈಗಾರಿಕೆಯ ಬಗ್ಗೆ ರಾಜ್ಯದ ಕೈಗಾರಿಕಾ ಮಂತ್ರಿಗಳನ್ನು ಕೇಳಿದ್ದೇನೆ. ಅಲ್ಲಿರತಕ್ಕ ಜನರ ಸಮಸ್ಯೆಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು ೧೫–೨೦ ದಿವಸಗಳು ಕಳೆದರೂ ಉತ್ತರ ಬರಲಿಲ್ಲ. ಇದಕ್ಕೂ ಮುಂಚೆ ಹೋರಾಟ ಮಾಡಿದ್ದುದು ಆಗಿದೆ. ಕಾರ್ಮಿಕ ಮಂತ್ರಿಗಳ ಮನೆಯ ಮುಂದೆ ಧರಣ ಮಾಡಿದೆವು, ಆದರ ಬಗ್ಗೆ ಯಾ ಮಾತುಕತೆ ಇಲ್ಲ. ನಮ್ಮ ಬೇಡಿಕೆ ಏನಿತ್ತು, ನೀವು ನಂಟೇ ಸಮಿತಿಯನ್ನು ಕರೆಯಿರಿ, ಸಂಬಂಧಪಟ್ಟ ಇಲಾಖಾ ಅಧಿಕಾರಿಗಳನ್ನು ಕರೆಯಿರಿ ಚರ್ಚೆ ಮಾಡೋಣ ಎಂದು ಹೇಳಿದೆವು. ಸಭೆಯನ್ನು ಕರೆದಾಗ ಚರ್ಚೆ ಮಾಡೋಣ ಎಂದರೆ ಮಾನವೀಯತೆ, ಇಲ್ಲದಂಥ ಸರ್ಕಾರಕ್ಕೆ ಅಡ್ಜರ್ನ್‌ಮೆಂಟ್ ಮೋಷನ್ ಕೊಡದೆ ಇನ್ನು ಯಾವ ಮೋಷನ್ ಕೊಡಬೇಕು. ಬರಗಾಲದ ಗಂಭೀರ ಪರಿಸ್ಥಿತಿಯ ಬಗ್ಗೆ ನಾವು ಅಲ್ಲಗಳೆಯಂವ್ವದಿಲ್ಲ. ಬರಗಾಲದ ಬಗ್ಗೆ ಕಳೆದ ವರ್ಷ, ಅದರ ಆಚೆಯ ವರ್ಷ, ಮೊಟ್ಟಮೊದಲನೆಯದಾಗಿ ಪ್ರಸ್ತಾಪ ಮಾಡಿದುಥ ಜನ ನಾವು. ಇವೊತ್ತು ಬರಗಾಲದ ವಿಚಾರವನ್ನು ಕಡಿಮೆ ಎಂದು ನಾವು ಹೇಳುವುದಿಲ್ಲ. ಆದರ ವಿಚಾರ ಬಂದಾಗ ಆದರಲ್ಲೂ ನಾವು ಭಾಗವಹಿಸಿ ಮಾತನಾಡುತ್ತೇವೆ, ಸರ್ಕಾರದ ಸಾಧನೆ ಏನೆಂದು ನಮಗೆ ಗೊತ್ತಿದೆ ಅದನ್ನು ಆ ಸಂದರ್ಭದಲ್ಲಿ ಹೇಳುತ್ತೇವೆ. ಆದ್ದರಿಂದ, ಇವೊತ್ತು ಈ ವಿಚಾರದ ಬಗ್ಗೆ ಸಂಪೂರ್ಣವಾಗಿ ವಿಸ್ತಾರವಾಗಿ ಚರ್ಚೆಯಾಗಬೇಕು, ಮಂತ್ರಿಗಳ ಹಾಗೂ ಸರ್ಕಾರದ ಅದಕ್ಷತೆ ಬಗ್ಗೆ ಚರ್ಚೆಯಾಗಬೇಕು. ಆದ್ದರಿಂದ, ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಬೇಕು, ಈ ವಿಚಾರದಲ್ಲಿ ನಮಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಪಂತ್ರೊಮ್ಮೆ ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.— ಅಧ್ಯಕ್ಷರೆ.... ..

ಶ್ರೀ ಎ. ಲಕ್ಷ್ಮೀಸಾಗರ್.— ಅಧ್ಯಕ್ಷರೆ, ನಿಯಮ ೫೯ರ ಪ್ರಕಾರ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇಲ್ಲ. ಇದರ ಬಗ್ಗೆ ಬೇರೆ ರೂಪದಲ್ಲಿ ತಂದು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇದೆ. ಅರ್ಜೆಂಟ್ ಪಬ್ಲಿಕ್ ಇಂಪಾರ್ಟೆನ್ಸ್ ಎಂದರೆ ಏನು ಎನ್ನುವುದು ಮಾನ್ಯ ಕೃಷ್ಣನ್ ರವರಿಗೆ ಗೊತ್ತಿದೆ,

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಲಕ್ಷ್ಮೀಸಾಗರ್ ಅವರು ನಮ್ಮ ನಿಲುವಳಿ ಸೂಚನೆಯನ್ನು ಓದಬೇಕು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಓದಿದ್ದೇನೆ. ನನ್ನ ನಿಲುವು ಏನು ಎಂದು ಹೇಳಲಿಕ್ಕೆ ಅಧಿಕಾರ ಇಲ್ಲ ಎಂದರೆ ಹೇಗೆ ? ಸ್ವಾಮಿ, ತಾವು ಏನು ಹೇಳಿದಿರಿ ಎನ್ನುವುದನ್ನು ಕೇಳಿದ್ದೇನೆ. ನಾನೂ ಅದೇ ರೀತಿ ಮಾತನಾಡುತ್ತಿದ್ದೇನೆ. ನಾನು ಈ ವಿಷಯ ಮುಖ್ಯವಾದುದು ಅಲ್ಲ ಎಂದು ಹೇಳಲಿಲ್ಲ. ಅದು ನಿಲುವಳಿ ಸೂಚನೆಗೆ ಬರುವುದಿಲ್ಲ ಎಂದು ಹೇಳಿದ್ದೇನೆ.

(ಗೊಂದಲ)

1–25 P. M.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೆ, ನಿಯಮ ೫೯ರಲ್ಲಿ ಏನು ಹೇಳುತ್ತದೆ ಎಂಬುದನ್ನು ಅವರ ಗಮನಕ್ಕೆ ತರಬೇಕಾಗಿದೆ. In the Notice we have said "Failure and inability of the Govt. to arrest the growing crisis leading to untold misery, hardship, and non-employment.....

If this is not the matter of urgent public importance, then which is the matter of urgent public importance ?

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಹೇಳಬೇಕಾದದ್ದು ನನ್ನ ಕರ್ತವ್ಯ ಇದೆ. ಕಾನೂನು ದೃಷ್ಟಿಯಿಂದ ಇದನ್ನು ಬೇರೆ ರೂಪದಲ್ಲಿ ತರಬೇಕೆಂದು ಹೇಳುತ್ತಿದ್ದೇನೆ, ಆಪ್ಪಕ್ಕೇ ಅವರು ಹಾಗೆ ಕೂಗಾಡಿದರೆ ಹೇಗೆ ?

ಶ್ರೀ ಯು. ಭೂಪತಿ.— ಈ ವಿಚಾರವನ್ನು ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಲ್ಲದೆ ಬೇರೆ ಯಾವ ರೂಪದಲ್ಲಿ ತರಬೇಕು ಎಂಬುದನ್ನು ತಾವೇ ಹೇಳಿ ?

SRI M. S. KRISHNAN.— I will read Rule No.59 of the Rules of procedure Conduct of Business in the L.A. It reads thus:

"59. Subject to the provision of these rules, a motion for an adjournment of the business of the House for the purposes of discussing a definite matter of urgent public importance may be made with the consent of the Speaker".

It is a definite matter i.e., Failure of the Govt. in regard to industrial crisis in textile mills.

ಅಧ್ಯಕ್ಷರು.— ಮಾನ್ಯ ಕೃಷ್ಣನ್‌ರವರೆ, ಇದು ತಮಗೂ ಗೊತ್ತಿದೆ, ಅವರಿಗೂ ಗೊತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, It is on urgent matter of public importance. Industrialists are also suffering, not only workers. Therefore, this is a matter of urgent public importance.

Then, Rule 61 says:

"61. The right to move the adjournment of the House for the purpose of discussing a definite matter of urgent public importance shall be subject to the following restrictions, namely:

i) not more then one such motion shall be made at the same sitting.

ii) not more than one matter shall be discussed on the motion. Only one matter we have brought.

ಅಧ್ಯಕ್ಷರು.— ಅಡ್ಜರ್ನ್‌ಮೆಂಟ್.ರೂಪದಲ್ಲಿ ಬೇಡ, ಬೇರೆ ರೂಪದಲ್ಲಿ ತರಿಸಿ ಎಂದು ಅವರು ಹೇಳಿದ್ದಾರೆ,

ಶ್ರೀ ಜೆ. ಹೆಚ್. ಪಟೇಲ್.— ಅವರು ಬೇರೆ ರೂಪದಲ್ಲಿ ತಂದಾಗ ನಾನು ಉತ್ತರ ಕೊಡುತ್ತೇನೆ.

(ಗೊಂದಲ)

SRI M. S. KRISHNAN.— Is he a Minister ? what does it mean?

ಅಧ್ಯಕ್ಷರು.— ಅವರು ಹೇಳಿದಮೇಲೆ ರೂಲಿಂಗ್ ಕೊಡಬೇಕೋ ಅಥವಾ ಮುಂಚೆಯೇ ಕೊಡಬೇಕೋ ಎಂಬುದನ್ನು ಹೇಳಿ.

(ಗೊಂದಲ)

ಅಧ್ಯಕ್ಷರು.— ಈರೀತಿ ೮-೧೦ ಜನ ಒಟ್ಟಿಗೇ ನಿಂತು ಮಾತನಾಡಿದಗೆ ನಾನು ಯಾವ ರೀತಿ ಉತ್ತರ ಕೊಡಬೇಕಂ. ದಯವಿಟ್ಟು ಎಲ್ಲರೂ ಕೂಳಿತಕೊಳ್ಳಿ. ಯಾವ ರೂಪದಲ್ಲಿ ಈ ವಿಷಯವನ್ನು ತರಬೇಕೆಂಬುದನ್ನು ಅವರು ಹೇಳಲಿ. ಅಡ್ಜರ್ನ್‌ಮೆಂಟ್ ರೂಪದಲ್ಲಿ ಅಲ್ಲ ಎಂದು ಅವರು ಹೇಳಿತ್ತಿದ್ದಾರೆ. ಅಂದಮೇಲೆ ಯಾವ ರೂಪದಲ್ಲಿ ಎಂಬುದನ್ನು ಅವರು ಹೇಳಬಹುದು.....

(ಗೊಂದಲ)

ಅಧ್ಯಕ್ಷರು.— ದಯವಿಟ್ಟು ಎಲ್ಲರೂ ಕೂಳಿತಂಕೊಳ್ಳಿ. ಅವರು ಏನು ಹೇಳುತ್ತಾರೆ ನೋಡೋಣ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣನ್, ಯು. ಭೂಪತಿ ಕೆ.ಬಿ.ಶಾಣಪ್ಪ, ಆರ್.ವೆಂಕಟರಾಮಯ್ಯ ಪಂಪಾಪತಿ ಇವರುಗಳು ಅಧ್ಯಕ್ಷರ ಮುಂದಿರುವ ವೆಲ್‌ನೊಳಗೆ ಪ್ರವೇಶಿಸಿದರು.)

ಅಧ್ಯಕ್ಷರು.— ನೀವು ಈ ರೀತಿ ವೆಲ್‌ನೊಳಗೆ ಬರಬಾರದು. ನೀವು ನಿಮ್ಮ ಜಾಗಕ್ಕೆ ಹೋಗಿ ಕೂಳಿತುಕೊಳ್ಳಿ ಯಾವ ಮಾನ್ಯ ಸದಸ್ಯರೂ ಈ ವೆಲ್‌ನೊಳಗೆ ಬರಬಾರದೆಂದು ನಾನು ಹೇಳುತ್ತಿದ್ದೇನೆ. ನೀವು ಇಲ್ಲಿ ನಿಂತುಕೊಂಡು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಸಭಾ ನಾಯಕರು ಏನು ಹೇಳುತ್ತಾರೋ ಕೇಳಿ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಕಾನೂನು ಮಂತ್ರಿಗಳು ಮಾಡಿದ ಅಪರಾಧವಾದರೂ ಏನು ? ಅವರು ಏನು ಹೇಳಿದರು ಎಂದರೆ ಬೇರೆ ರೂಪದಲ್ಲಿ ಇದು ಬಂದಾಗ ನಾನು ಉತ್ತರ ಕೊಡುತ್ತೇವೆಂದು ಹೇಳಿದರು.....

(ಗೊಂದಲ)

ಅಧ್ಯಕ್ಷರು.— ನಥಿಂಗ್ ವಿಲ್ ಗೋ ಆನ್ ರೆಕಾರ್ಡ್.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ಇವರು ಹೀಗೆ ಕೂಗಾಡಿದರೆ ಆಗುತ್ತದೆಯೇ ? ಜನರು ಇದರಿಂದ ಸಮಾಧಾನವಾಗುತ್ತಾರೆಯೇ ? ಅವರು ಕೂಗಾಡುವುದು ಬೇಡ.

(ಗೊಂದಲ)

MR. SPEAKER.—Nothing will go on record.

೧-೫೦ ಪಿ. ಎಂ.

ಅಧ್ಯಕ್ಷರು.— ಮಾನ್ಯ ಸಚಿವರು ಉತ್ತರ ಕೊಡುತ್ತಾರೆ ಅವನ್ನು ದಯವಿಟ್ಟು ಕೇಳಿರಿ. ಮಾನ್ಯ ವೆಂಕಟರಾಮಯ್ಯನವರೇ ತಾವು ಐದು ಜನ ಸದಸ್ಯರಂಗಳಿದ್ದೀರಿ. ತಾವು ಈ ರೀತಿ ಕೂಗಾಡಿದರೆ ಏನೂ ಪ್ರಯೋಜವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲು ಎದ್ದು ನಿಂತಿರುತ್ತಾರೆ. ಅವರು ಉತ್ತರವನ್ನು ಹೇಳುವುದೇ ಬೇಡವೇ ? ತಮಗೆ ಸರ್ಕಾರದ ಮುಖ್ಯ ಮಂತ್ರಿಗಳು ಏನು ಎನ್ನುವುದು ಗೊತ್ತಿದೆ, ಸಭಾ ನಾಯಕರು ಎಂದರೆ ಏನು ಎನ್ನುವುದು ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತು ಹೇಳಲು ಹೋದರೆ ಅದನ್ನೂ ಕೂಡ ಹೇಳಲಿಕ್ಕೆ ಆಗುವುದಿಲ್ಲ ವೆಂದು ಹೇಳಿದರೆ ನಾನು ಇನ್ನು ನಿಮಗೆ ಎ.ಬಿ.ಸಿ.ಡಿ ಹೇಳಿಕೊಡಲೇ ?

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಸದಸ್ಯರು ತಮ್ಮ ಸ್ಥಾನವನ್ನು ಬಿಟ್ಟು ಬರಲಿಕ್ಕೆ ಪ್ರವೋಕೇಷನ್ ಆದರೂ ಏನು ? ಸಂಬಂಧಪಟ್ಟ ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಅವರು ಹೇಳಿದ್ದಾದರೂ ಏನು. ಅವರು ಹೇಳಿದ್ದು ಈ ಸೂಚನೆ ಬೇರೆ ರೀತಿಯಲ್ಲಿ ಬಂದರೆ ಉತ್ತರವನ್ನು ಕೊಡುತ್ತೇನೆಂದು ಅಡ್ಜರ್ನ್‌ಮೆಂಟ್ ಮೂಲಕವಾಗಿ ಬರಬೇಕಾಗಿಲ್ಲ, ಬೇರೆ ರೀತಿಯಲ್ಲಿ ತೆಗೆದುಕೊಳ್ಳಬಹುದು ಎಂದು ಪಾರ್ಲಿಮೆಂಟ್ ಖಾತೆಯ ಮಂತ್ರಿಗಳು ಹೇಳಿದರೆ ವಿನಹ ಯಾರೂ ಅದು ಮಹತ್ವದ್ದಲ್ಲವೆಂದು ಹೇಳಲಿಲ್ಲ. ಇದ್ದರಿಂದ ಅವರೇ ಹೇಳಲಿ, ಇವರೇ ಹೇಳಲಿ ಅದು ಎಷ್ಟು ಮಹತ್ವದ್ದು ಎನ್ನುವುದು ಗೊತ್ತಾಗುತ್ತದೆ. ಮಾನ್ಯ ಪಂಪಾಪತಿಯವರು ಮತ್ತು ಮಾನ್ಯ ಕೃಷ್ಣನ್

ರವರು ಬರೆದಿದ್ದಾರೆ. ಇದು ಕೇವಲ ದಾವಣಗೆರೆಯ ಪ್ರಶ್ನೆಯಲ್ಲ. ಇದೇರೀತಿಯಾದ ಸಮಸ್ಯೆ ಮೈಸೂರಿನಲ್ಲಿಯೂ ಇದೆ. ಈ ವಿಚಾರದಲ್ಲಿ ನಮ್ಮ ಸರ್ಕಾರ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಅಷ್ಟರಮಟ್ಟಿಗೆ ಕ್ರಮ ತೆಗೆದುಕೊಂಡಿದೆ. ಅಲೆಂಬಿಕ್ ಕಾರ್ಖಾನೆ ಇದೆ, ಅದಕ್ಕೆ ಸರ್ಕಾರದ ಖಜಾನೆಯಲ್ಲಿರತಕ್ಕಂಥ ಹಣವನ್ನೆಲ್ಲ ಹಾಕಿ ನಡೆಸಬೇಕೆಂದರೆ ಸಾಧ್ಯವಾಗುವುದಿಲ್ಲ. ಸಾದಾರಣವಾಗಿ ಈ ರೀತಿ ನಡೆಯುತ್ತಿರತಕ್ಕಂಥ ಕಾರ್ಖಾನೆಗಳಿಗೆಲ್ಲ ದುಡ್ಡನ್ನು ಹಾಕಿ ನಾವು ಸಾಕಷ್ಟು ಕಷ್ಟ ಪಡುತ್ತಿದ್ದೇವೆ. ಇವೊತ್ತು ನಮ್ಮ ರಾಜ್ಯ ಸರ್ಕಾರದ್ದು ಹಣಕಾಸಿನ ಪರಿಸ್ಥಿತಿ ಅಷ್ಟು ಸರಿಯಾಗಿಲ್ಲ. ಕೇಂದ್ರ ಸರ್ಕಾರದಿಂದ ಹಣ ಬರಬೇಕು. ತಾವೂ ಕೂಡ ಹೇಳಿದ್ದೀರಿ. ನಾವು ಅದನ್ನು ಮಾಡಿದ್ದೇವೆ. ಕೆ.ಆರ್ ವಿಲ್ಸ್ ಪರಿಷ್ಕರಣದ ಬಗ್ಗೆಯೂ ಕೇಂದ್ರ ಸರ್ಕಾರದ ಉದ್ಯೋಗ ಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ ಒಂದು ಸಲ ಅಲ್ಲ ಹತ್ತು ಸಾರಿ ಪತ್ರವನ್ನು ಬರೆದಿದ್ದೇವೆ. ಅದನ್ನು ಚರ್ಚೆ ಮಾಡೋಣ.

ಶ್ರೀ ಆರ್. ವೆಂಕಟರಾಮಯ್ಯ.— ರಿಸರ್ವ್‌ಬ್ಯಾಂಕ್ ಬಗ್ಗೆ, ತಾವು ಹೇಳುವುದೇ ಒಂದಾದರೆ, ಮಾಡುವುದೇ ಒಂದಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.— ಅದಕ್ಕೆ ಮಾನ್ಯ ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿರುತ್ತಾರೆ. ನಿಮಗೆ ಸಮಾಧಾನವಿಲ್ಲವಾದರೆ ಈಗಲೂ ಉತ್ತರವನ್ನು ಕೊಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ಬರಗಾಲದ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಆದ್ದರಿಂದ ಇದನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.— ಬರಗಾಲದ ವಿಷಯದ ಬಗ್ಗೆ ಚರ್ಚೆ ಮಾಡಿದ ಮೇಲೆ ಇದಕ್ಕೆ ಎರಡನೇ ಸ್ಥಾನ ಕೊಡೋಣ.

(ಸಿ.ಪಿ.ಐ, ಮತ್ತು ಸಿ.ಪಿ.ಎಂ ನ ಎಲ್ಲ ಮಾನ್ಯ ಸದಸ್ಯರು ಈ ನಿಟ್ಟಿನಲ್ಲಿ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಂಡರು).

ಅಧ್ಯಕ್ಷರು.— ಶ್ರೀಮತಿ ನಾಗರತ್ನಮ್ಮನವರು ಒಂದು ಮಹತ್ವದ ವಿಚಾರವನ್ನು ಎತ್ತಿದ್ದಾರೆ, ಹಾಗೆಯೇ ಮಾನ್ಯ ಸದಸ್ಯರಾದ ಆರ್. ವೆಂಕಟರಾಮಯ್ಯನವರು ಮಹತ್ವದ ವಿಚಾರವನ್ನು ಎತ್ತಿದ್ದಾರೆ. ಇದರಲ್ಲಿ ಇವತ್ತಿನದಿವಸ ಯಾವುದನ್ನು ತೆಗೆದುಕೊಳ್ಳಬೇಕು, ನಾಳೆ ಯಾವುದನ್ನು ತೆಗೆದುಕೊಳ್ಳಬೇಕೆಂಬುದನ್ನು ಮೂರು ಗಂಟೆಗೆ ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಈಗಲೇ ತೆಗೆದುಕೊಳ್ಳೋಣ. ಗಮನ ಸೆಳೆಯುವ ಸೂಚನೆಯನ್ನು ಎಲ್ಲರೂ ಒಪ್ಪಿದರೆ ಈವೊತ್ತು ಐದು ಗಂಟೆಯಮೇಲೆ ತೆಗೆದುಕೊಳ್ಳೋಣ. ಈಗ ಬರಗಾಲದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.— ನಮ್ಮದೊಂದು ನಿಲುವಳಿ ಸೂಚನೆ ಇತ್ತು.

ಅಧ್ಯಕ್ಷರು.— ಅದನ್ನು ನಾಳೆ ತೆಗೆದುಕೊಳ್ಳೋಣ. ಬರಗಾಲದ್ದು ಮಹತ್ವದೆಂದು ಅವರೂ ಒಪ್ಪಿದ್ದಾರೆ, ನೀವೂ ಒಪ್ಪಿದ್ದೀರಿ. ಈಗ ಅವರು ಹೇಳಿಕೆ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಬರಗಾಲದ್ದು ಮಹತ್ವದ್ದೆಂದು ಒಪ್ಪಿದೆ.....

ಅಧ್ಯಕ್ಷರು.— ಇದತ್ತು ನಿಮ್ಮದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಶ್ರೀಮತಿ ನಾಗರತ್ನಮ್ಮನವರೇ, ನಿಮ್ಮ ಡೆಪ್ಯೂಟಿ ಲೀಡರ್‌ಗೆ ಸ್ವಲ್ಪ ಹೇಳಿ. ಬರಗಾಲದ್ದು ಮಹತ್ವದಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಲ್ಲಿ ಏನು ಕೊಲೆಯಾಗಿದೆ.....

ಅಧ್ಯಕ್ಷರು.— ಮಾನ್ಯ ಖರ್ಗೆಯವರು ಹೇಳುವುದು ಯಾವುದೂ ರೆಕಾರ್ಡ್ ಆಗುವುದಿಲ್ಲ. ನಾನು ಈಗ ಅವರನ್ನು ಹೇಳಿಕೆ ನೀಡಲು ಕರೆದಿದ್ದೇನೆ.